7. ಶಾಸನ ರಚನೆ :--

ಅ) ಕರ್ನಾಟಕ ಬಂದರುಗಳ (ಇಳಿದಾಣ ಮತ್ತು ಸಾಗಾಣಿಕೆ ಶುಲ್ಕಗಳು) (ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಬಂದರು (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಇದು 1960ರಲ್ಲಿ 45 ವರ್ಷದ ಹಿಂದೆ ಏನೊಂದು ಶುಲ್ಕ ರೂ.1.00 ಮತ್ತು ರೂ.5 ಇತ್ತು. ಇದನ್ನು ರೂ.1,00,000 ಮತ್ತು ರೂ.100 ಪ್ರತಿ ದಿವಸ ದಂಡ ವಿಧಿಸುವ ಬಗ್ಗೆ ಇವತ್ತು ಈ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಸುಮಾರು ರೂ.60 ಕೋಟಿವರೆಗೆ ಕಾಮಗಾರ ಸೇರಿದಂತೆ ಇತರೇ ಬಂದರಿಗೆ ಖರ್ಚು ಮಾಡುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಇದು ಪೆನಾಲ್ಟಿ ವಿಧಿಸುವುದಾಗಿದೆ, ಯಾವ ಅಫೆನ್ಸ್‌ಗೆ ಎಷ್ಟು ಪೆನಾಲ್ಟಿ, ಏತಕ್ಕೆ ಏರಿಸುತ್ತಿದ್ದಿರೆಂಬುದು ಗೊತ್ತಿಲ್ಲ. ಎಲ್ಲದಕ್ಕೂ ರೂ.100 ರಿಂದ ರೂ.1,00,000 ರೂ.5 ರಿಂದ ರೂ.1,000 ವರೆಗೆ ಎಂದರೆ, ಯಾವ್ಯಾವ ಅಫೆನ್ಸ್‌ಗೆ ಎಷ್ಟೆಷ್ಟು ಪೆನಾಲ್ಟಿ ಎಂದು ನಿಗದಿಪಡಿಸಲಾಗಿದ್ದರೆ, ಅಧಿಕಾರಿಗಳಿಗೆ ಬಹಳ ಒಳ್ಳೆಯದಾಗುತ್ತದೆ. ಈಗ ನಿನಗೆ ಒಂದು ಲಕ್ಷ ಪೆನಾಲ್ಟಿ ಹಾಕುತ್ತೇನೆಂದು ಹೇಳುವುದು, ಕುಳಿತು ಮಾತನಾಡಿಕೊಂಡು ಕಮ್ಮಿ ಮಾಡುವುದಕ್ಕಾಗುತ್ತದೆ. ನಿರ್ದಿಷ್ಟವಾಗಿ ಇಂತಹ ಅಫೆನ್ಸ್‌ಗೆ ಇಷ್ಟು ಪೆನಾಲ್ಟಿ ಇಂತಹ ತಪ್ಪಿಗೆ ಇಂತಹ ಪೆನಾಲ್ಟಿ ಎಂದು ವಿವರಿಸಬೇಕಲ್ಲವೇ? ಮತ್ತೆ ಈ ಬಂದರು ಇಲಾಖೆಯದ್ದೇನಾಗಿದೆ ಎಂದರೆ, ಆರೂವರೆ ಫೀಟ್ ಡ್ರಾಫ್ ಮಾತ್ರವಿರುವುದು, ಶಿಫ್‌ಗಳು ಬರುತ್ತಿಲ್ಲ. ಹಿಂದೆ ನಮ್ಮ ಸರ್ಕಾರವಿದ್ದಾಗ ಅದನ್ನು ಡ್ರೆಜಿಂಗ್ ಮಾಡಿ 9 ಮೀಟರ್ ಗೆ ಹೋಗಿತ್ತು. ಇವತ್ತು ಅದು ಕೆಳಗಡೆ ಟಚ್ ಆಗುತ್ತಿದೆ ಅದನ್ನು ಏತಕ್ಕೆ ಡ್ರಾಫ್ ಮಾಡಿಸುತ್ತಿಲ್ಲ, ಅಲ್ಲೇನಾದರು ಕೈವಾಡವಿದೆಯಾ? ಅಲ್ಲಿ ಈ ರೀತಿಯ

ಸಣ್ಣ ಸಣ್ಣ ವ್ಯವಸ್ಥೆ ನಡೆಯುತ್ತಿದೆ, ಅದಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಬೇಕು. ಇದನ್ನು ಮಾಡುವ ಮುಂಚೆ, ಈ ಕಣದಲ್ಲಿ development of port ಬಗ್ಗೆ ಏನಾದರೂ ಆಲೋಚನೆ ಮಾಡಬೇಕಾಗಿತ್ತು. ತಾವು, ಅಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಶಿಫ್‌ಗಳು ಬರುತ್ತಿಲ್ಲ, ಬೇರೆ ಕಡೆ ಏತಕ್ಕೆ ಹೋಗುತ್ತಿದೆ? ಏಕೆಂದರೆ, ನಮ್ಮಲ್ಲಿ ಡ್ರಾಪ್ 9 ಮೀಟರ್ ಕೊಟ್ಟರೆ, ಬೇರೆ ಕಡೆ ಹೋಗುವುದು ಕಡಿಮೆ. ಗೋವಾ ಈ ಕಡೆ ವೈಟಿಂಗ್ ಟೈಂಗಿಂತ ಕಾರವಾರಕ್ಕೆ ಬರುತ್ತಾರೆ. ಅದನ್ನು ತಾವು ದಯವಿಟ್ಟು ಮಾಡಬೇಕೆಂದು ಹೇಳುತ್ತಾ, ಈ ಪೆನಾಲ್ಟಿ ಬಗ್ಗೆ ವಿವರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆರವರು ಹೇಳುವಂತೆ, ರೇವಣ್ಣರವರೆ ಈ ವಿಧೇಯಕ ಬಹಳ ವೇಗ್ ಆಗಿದೆ. ಹಾಲಿ ನಿಯಮವನ್ನು ನೋಡಿ, ಈ ಪ್ರಕರಣದಲ್ಲಿ ರಚಿಸಿರುವ ಯಾವುದೇ ನಿಯಮದ ಉಲ್ಲಂಘನೆಯಾದಲ್ಲಿ, ಸರ್, ಎಂ.ಪಿ.ಪ್ರಕಾಶ್‌ರವರೆ, ಯಾವುದೇ ನಿಯಮದ ಉಲ್ಲಂಘನೆಯಾದರೆ, ಒಂದು ನೂರು ರೂಪಾಯಿಗಳಿರುವ ಪೆನಾಲ್ಟಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡು ಹೋಗುತ್ತೀರಿ. ಐದು ರೂಪಾಯಿ ಇರುವುದನ್ನು ಐದು ಸಾವಿರ ಮಾಡುತ್ತಿದ್ದೀರಿ, ನೂರು ರೂಪಾಯಿ ಪೆನಾಲ್ಟಿ ಹಾಕುವ ಅವಕಾಶವಿರುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನಾಗಿ ಮಾಡಿದರೆ, ಅಧಿಕಾರಿಗಳು ಯಾರಿಗೂ ಪೆನಾಲ್ಟಿಯನ್ನು ಹಾಕುವುದೇ ಇಲ್ಲ. ಎರಡು ಸಾವಿರನೊ, ಮೂರು ಸಾವಿರನೊ, ನಾಲ್ಕು ಸಾವಿರನೊ, ಐದು ಸಾವಿರನೊ ಅಧಿಕಾರಿಗಳು ತೆಗೆದುಕೊಂಡು ಸುಮ್ಮನಾಗಿಬಿಡುತ್ತಾರೆ. ಒಂದು ಲಕ್ಷ ರೂಪಾಯಿಗಳ ಪೆನಾಲ್ಟಿಯನ್ನು ಕಮರ್ಷಿಯಲ್‌ಗೆ ಹಾಕುತ್ತೀರಾ?

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) :– ರೇವಣ್ಣನವರಿಗೆ ಈ ವಿಧೇಯಕವನ್ನು ತರುವ ಅವಶ್ಯಕತೆಯೇ ಇರಲಿಲ್ಲ. ಏಕೆಂದರೆ, ಉಪ ಮುಖ್ಯಮಂತ್ರಿಗಳು ರಾಜ್ಯದ ಖಜಾನೆ ತುಂಬಿದೆ, ನಮ್ಮದು ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳುತ್ತಾರೆ. ಈಗಾಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ, ಒಂದು ನೂರು ರೂಪಾಯಿ ಇಂದ ಒಂದು ಲಕ್ಷ, 5 ರೂಪಾಯಿ ಇರುವುದಕ್ಕೆ ಐದುನೂರು ರೂಪಾಯಿ ಹೀಗೆ ಒಮ್ಮಿಂದೊಮ್ಮಲೇ ಒಂದು ಲಕ್ಷ ರೂಪಾಯಿಗೆ ಏರಿಸುವುದು ಸರಿಯಾದ ರೀತಿಯಲ್ಲ. ಈ ಬಗ್ಗೆ ತಾವು ಕೂಲಂಕುಷವಾಗಿ ತನಿಖೆ ಮಾಡಿಲ್ಲ, ತಾವು ಗಮನ ಸೆಳೆದಿಲ್ಲ. ಏಕೆಂದರೆ, ಬೇರೆ ಯಾರೇ ಮಂತ್ರಿಗಳು

ತಂದಿದ್ದರೆ ಒಪ್ಪುತ್ತಿದ್ದೇವು, ತಾವು ತರುವುದು ಅಷ್ಟೇನು ಅವಶ್ಯಕತೆ ಇರಲಿಲ್ಲ, ಏಕೆ ದಂಡ ವಿಧಿಸುವ ಬಿಲ್ ತಂದಿದ್ದೀರಿ, ಇದರಿಂದ ತೊಂದರೆಯಾಗುತ್ತದೆ. ಆ ತೊಂದರೆಯನ್ನು ತಾವು ಗಮನದಲ್ಲಿಟ್ಟುಕೊಂಡು ಇಷ್ಟು ಹೆಚ್ಚು ಮಾಡುವುದು ಸರಿಯಲ್ಲ, ಆ ಬಗ್ಗೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ (ಅಂಕೋಲ) :– ಮಾನ್ಯ ಅಧ್ಯಕ್ಷರೆ, ಈ ಹಡಗು ಇಳಿಸುವ ಮತ್ತು ಸಾಗಾಣಿಕೆ ಶುಲ್ಕದಲ್ಲಿ ಬದಲಾವಣೆಯನ್ನು ತರುವುದು ಅಗತ್ಯವಿದೆ, ತರಬೇಕು, ಆದರೆ, ಒಂದು, ಅದು ಇಂತಿಂತಹ ಕೇಸ್‌ಗೆ ಎಂದಾಗಬೇಕು. ಏಕೆಂದರೆ, ಅಂಕೋಲ ಮತ್ತು ಕಾರವಾರ ಈ ಎರಡೂ ಬಂದರುಗಳು ನಮ್ಮ ಜಿಲ್ಲೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಇವತ್ತು ನಮ್ಮ ಐರನ್ ಓರ್ ಚಟುವಟಿಕೆಗಳು ಪ್ರಾರಂಭವಾದ ನಂತರದಲ್ಲಿ ಆದಾಯ ಸಿಕ್ಕಾಪಟ್ಟೆ ಬರುತ್ತಿದೆ. ಉದಾ: ಕಾರವಾರ ಬಂದರಿನಲ್ಲೆ 75 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಆದಾಯ ಈ ಒಂದು ವರ್ಷದಲ್ಲೇ ಬಂದಿದೆ. ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ನಿಯಂತ್ರಿಸಬೇಕಾದ ಅಗತ್ಯವು ಇದೆ. ಸ್ಥಳದಲ್ಲಿರುವ ಅಧಿಕಾರಿಗಳಿಗಂತು ಬಹಳ ದೊಡ್ಡ ಜವಾಬ್ದಾರಿಗಳಿರುತ್ತವೆ. ಏಕೆಂದರೆ, ಇವರು ಹೋಗಿ ಆ ಹಡಗನ್ನು ತರಬೇಕಾಗುತ್ತದೆ. ತಂದು ಹಡಗಿಗೆ ಸರಕು ಲೋಡ್ ಆದ ನಂತರ ಸಾಗಾಣಿಕೆಗೆ ಪರ್ಮಿಷನ್ ಕೊಡುವುದು ಇತ್ಯಾದಿ ಇರುತ್ತದೆ. ಒಂದು ಹಂತದಲ್ಲಿ ನಾವು ಇಷ್ಟು ದೊಡ್ಡ ಪ್ರಮಾಣದ ದಂಡವನ್ನು ಹಾಕುವುದರಿಂದ ಇದು ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಎನ್ನುವುದನ್ನು ನೋಡಬೇಕು. Iron Oar ಚಟುವಟಿಕೆ ಇರುವಾಗ ಈ ದಂಡ ದೊಡ್ಡದೆಂದು ಅನ್ನಿಸುವುದಿಲ್ಲ. ಆದರೆ ಬೇರೆ ಎಲ್ಲ ಚಟುವಟಿಕೆಗಳು ಅಲ್ಲಿ ನಡೆಯುತ್ತವೆ. ಉದಾಹರಣೆಗೆ ಅಲ್ಲಿ ಸಕ್ಕರೆ ತರುತ್ತಾರೆ, ಗೊಬ್ಬರ ತರುತ್ತಾರೆ, ಬೇರೆ ಬೇರೆ ಅನೇಕ ರೀತಿಯ ಆಯಿಲ್‌ಗಳನ್ನು ಅಲ್ಲಿ import ಮಾಡುತ್ತಾರೆ, ಅನೇಕ ರೀತಿಯ ಬಂದರು ಚಟುವಟಿಕೆಗಳು ಅಲ್ಲಿ ನಡೆಯುತ್ತಿವೆ. Iron Oar ಮಾರಾಟ ಮಾಡುವವರಿಗೆ ಇದು ಬಹಳ ದೊಡ್ಡ ಪೆನಾಲ್ಟಿ ಎಂದು ಅನ್ನಿಸುವುದಿಲ್ಲ. ಉಳಿದವರೆಲ್ಲರಿಗೆ ಇದು ಬಹಳ ದೊಡ್ಡ ಪ್ರಮಾಣದ penalty ಎಂದು ಆಗಬಹುದು. ಇದನ್ನು ನಿಯಂತ್ರಿಸುವಂತಹ ಅಗತ್ಯತೆ ಇದೆ, ಹಾಗಾಗಿ ಅಧಿಕಾರಿಗಳಿಗೆ ಅಲ್ಲಿ ಸೂಚನೆಯನ್ನು ಕೊಟ್ಟು ಬಂದರಿನ ಚಟುವಟಿಕೆಯನ್ನು ಸಮರ್ಪಕವಾಗಿ ನಿಯಂತ್ರಿಸುವಂತಹ ಅಗತ್ಯತೆ ಇದೆ. ಇನ್ನು ಸ್ಪಷ್ಟವಾಗಿ ಈ ಕಾನೂನಿನಲ್ಲಿ ಬರುವಂತೆ ಅವಕಾಶವನ್ನು ಮಾಡಿ ಕೊಡಬೇಕೆಂದು ಹೇಳುತ್ತಾ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು

ಉಲ್ಲೇಖ ಮಾಡಿದರು, ಬಂದರುಗಳಿಂದ ಇಷ್ಟೊಂದು ಪ್ರಮಾಣದಲ್ಲಿ ಆದಾಯ ಬರುತ್ತಿದೆ. ಕಾರವಾರ ಬಂದರಿನಿಂದ 75 ಕೋಟಿ ರೂಪಾಯಿ ಆದಾಯ ಬರುತ್ತಿದೆ, ಇನ್ನು ಉಳಿದ ಬಂದರುಗಳಾದ ಮಂಗಳೂರು ಬಂದರು, ಬಿಳಿ ಕೆರೆ ಬಂದರು ಇತ್ಯಾದಿ ಬಂದರುಗಳಿಂದ ದೊಡ್ಡ ಪ್ರಮಾಣದಲ್ಲಿ ಆದಾಯ ಬರುತ್ತಿದೆ. ಆ ಬಂದರುಗಳ ಸ್ಥಿತಿ ನೋಡಿದರೆ, ಅದು ಬಹಳ ಶೋಚನೀಯ ಇದೆ. ನಮ್ಮ ಬಂದರುಗಳನ್ನು ಅಭಿವೃದ್ಧಿಪಡಿಸಲಿಲ್ಲ, ಹೂಳೆತ್ತಲಿಲ್ಲ, ಅಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ಈ ರೀತಿಯ ಅನೇಕ ತೊಂದರೆಗಳು ಇವೆ. ಹಾಗಾಗಿ ನಮ್ಮ ರಾಜ್ಯದ ಬಂದರುಗಳ ಬಗ್ಗೆ ಒಂದು ನೀಲಿ ನಕ್ಷೆ ಆಗಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಪೋರ್ಟ್ ಅಥಾರಿಟಿ ಮಾಡಿ ಎಂದು ನಾನು ಸಜೆಸ್ಟ್ ಮಾಡುತ್ತೇನೆ. Port Authority ಎಂದು separate ಆಗಿ ಮಾಡಿದರೆ, ಎಲ್ಲವನ್ನು immediate ಅಲ್ಲೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನಮ್ಮ ರಾಜ್ಯದ ಬಂದರುಗಳು ನೈಸರ್ಗಿಕವಾಗಿ ಅತ್ಯುತ್ತಮವಾದ ಬಂದರುಗಳಾಗಿವೆ. ಬಂದರುಗಳ ಬಗ್ಗೆ ಸಮಗ್ರವಾದ ನೀಲಿ ನಕ್ಷೆಯನ್ನು ಮಾಡಬೇಕಾದ ಅಗತ್ಯತೆ ಇದೆ. ನಾವು ಹಿಂದೆ ಬಿದ್ದಿದ್ದೇವೆ. ಬೇರೆ ಬೇರೆ ರಾಜ್ಯದವರು ಬಂದರು ಚಟುವಟಿಕೆಗಳನ್ನು ಪ್ರೋತ್ಸಾಹ ಮಾಡುವುದನ್ನು ನೋಡಿದಾಗ ನಿಜವಾಗಿ ನಮ್ಮ ಸರ್ಕಾರ ಈ ವಿಷಯಗಳಲ್ಲಿ ಇನ್ನಷ್ಟು ಹೆಚ್ಚು ಬಲವಾದಂತಹ ಕ್ರಮ ತೆಗೆದುಕೊಳ್ಳಬೇಕಾದಂತಹ ಅಗತ್ಯತೆ ಇದೆ. ಸಮಗ್ರವಾದ ಬಂದರುಗಳು ನೀಲಿ ನಕ್ಷೆಯನ್ನು ಮಾಡಿ ಅಭಿವೃದ್ಧಿಪಡಿಸಿ, ಅನೇಕ ವಹಿವಾಟುಗಳನ್ನು ಮಾಡುವುದಕ್ಕೆ ಒಳ್ಳೆಯ ಒಂದು ಮಾಧ್ಯಮ ಇದೆ. ಅದನ್ನು ಮಾಡುವುದಕ್ಕೆ ಸರ್ಕಾರ ಚಿಂತಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ತರತಕ್ಕಂಥದ್ದರ ಬಗ್ಗೆ ನನ್ನ ವಿರೋಧ ಇಲ್ಲ. ನೀವು ಕೆಟಗರೈಸೇಷನ್ ಮಾಡಲಿಲ್ಲ. ಅಲ್ಲಿಗೆ ಅದಿರು ಹೋಗುತ್ತದೆ. ಬೇರೆ ಸಣ್ಣ ಸಣ್ಣ ವಸ್ತುಗಳು ಸಾಗಾಣಿಕೆ ಮಾಡುತ್ತಾರೆ. ಬಡವರು ತೆಗೆದುಕೊಂಡು ಹೋಗತಕ್ಕಂಥದ್ದು, ಕಲ್ಲು ಎಲ್ಲ ಹೋಗುತ್ತದೆ. ಗ್ರಾನೈಟ್ ಐರನ್ ಓರ್ ಇದೆಲ್ಲಾ ಹೋಗುತ್ತದೆ. ಹಾಗಾಗಿ ಅದನ್ನು increase ಮಾಡಲೇಬೇಕು

ಅದರಲ್ಲಿ ಏನು ಭಿನ್ನಾಭಿಪ್ರಾಯ ಇಲ್ಲ. ನೀವು ವರ್ಗೀಕರಣ ಮಾಡಿ. ಗ್ರಾನೈಟ್‌ಗೆ ಎಷ್ಟು ಹಾಕಬೇಕು, ಐರನ್ ಓರ್‌ಗೆ ಎಷ್ಟು ಹಾಕಬೇಕು? ಎನ್ನತಕ್ಕಂಥದ್ದು ಕೆಟಗರೈಸ್ ಮಾಡದೆ, ಜನರಲ್ ಆಗಿ ನೀವು ಒಬ್ಬ ಅಧಿಕಾರಿ ಕೈಗೆ ಕೊಟ್ಟು ಬಿಟ್ಟರೆ, ಅವನು ಮನಸೋ ಇಚ್ಛೆ ಒಂದಿಷ್ಟು ಹಾಕಿಕೊಂಡು ಹೋಗಿ, ಎಲ್ಲರನ್ನೂ ಕತ್ತರಿಸತಕ್ಕಂತಹ ಕೆಲಸ ಆಗುತ್ತದೆ. ಆದ್ದರಿಂದ ಆ ಕೆಟಗರೈಸೇಷನ್ ಮಾಡುವುದು ಬಹಳ ಮುಖ್ಯ. ಇದರಲ್ಲಿ ಸಣ್ಣ ಸಣ್ಣ ವಸ್ತುಗಳು ಏನಾದರೂ ಇದ್ದರೆ, ಅದು ಜಾಸ್ತಿ ಮಾಡಿ. ಪರ್ಸೆಂಟೇಜ್ ಜಾಸ್ತಿಯಾಗಿದೆ. ಐದು ರೂಪಾಯಿ ಇದ್ದುದು 5,000 ಎಂದು 1960ನೇ ಇಸವಿಯಲ್ಲಿ ನೀವು ಈ ರೇಟ್ ನಿಗದಿ ಮಾಡಿದಿರಿ ಎಂದು ಇಟ್ಟುಕೊಳ್ಳಿ. 60 ವರ್ಷಗಳ ಹಿಂದೆಯೇ ಮಾಡಿದ್ದೀರಿ ಎಂದು ಇಟ್ಟುಕೊಳ್ಳಿ. 60 ವರ್ಷಗಳ ಹಿಂದೆ ಮಾಡಿದರೂ ಕೂಡ ಐದು ರೂಪಾಯಿಗೆ 5000 ಈಕ್ವಲ್ ಆಗುವುದಿಲ್ಲ. ಅದರಲ್ಲಿ ಸಮಸ್ಯೆ ಜಾಸ್ತಿಯಾಗುತ್ತದೆ. ಏಕಾಏಕಿ ಇಷ್ಟೊಂದು ಜಾಸ್ತಿ ಮಾಡುವುದು ಸರಿಯಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಕಾನೂನು ಇಲಾಖೆಯವರ ತಪ್ಪು ಹೆಚ್ಚಿಗೆ ಕಾಣುತ್ತದೆ. ನಮಗೆ IPC ಇರಲಿಲ್ಲ. ನಾವು ಬ್ರಿಟೀಷರನ್ನು ನೋಡಿ IPC ಮಾಡಿಕೊಂಡೆವು. IPC ಯಲ್ಲಿ ಯಾವ ಸ್ವರೂಪದ ಅಪರಾಧಕ್ಕೆ ಏನು ಶಿಕ್ಷೆ ಕೊಡಬೇಕೆಂದು ಹೇಳಿ ಅಲ್ಲಲ್ಲೇ ವರ್ಣಿಸುತ್ತಾ ಹೋಗುತ್ತಾರೆ. ಈ ದಂಡ ಏಕೆ ವಿಧಿಸುತ್ತೇವೆ, ಯಾವುದೇ ಒಂದು ಅಪರಾಧವನ್ನು ಮಾಡುವುದರಿಂದ ನ್ಯಾಯವಾಗಿ ಸರ್ಕಾರಕ್ಕೆ ಬರಬಹುದಾದ ಆದಾಯ ವಂಚಿತವಾದರೆ ಆ ಅಪರಾಧ ಮಾಡಿದವನು ಸಿಕ್ಕಿ ಬಿದ್ದಲ್ಲಿ ಅವನಿಗೆ ಏನು ಹಣ ಉಳಿಕೆ ಆಗುತ್ತಿತ್ತು ಅದಕ್ಕಿಂತ ಸ್ವಲ್ಪ ಹೆಚ್ಚಿಗೆ ಹಣ ಅವನ ಕೈಯಲ್ಲಿ ದಂಡ ಕಟ್ಟಿಸಿಕೊಂಡರೆ ಪುನಃ ಅವನು ಆ ರೀತಿಯ ವಂಚನೆ ಮಾಡುವ ಕೆಲಸಕ್ಕೆ ಕೈ ಹಾಕಬಾರದು ಎನ್ನುವ ಉದ್ದೇಶದಿಂದ ದಂಡ ಹಾಕುವುದು. ಆ ವಂಚನೆ ಕೆಲಸ ಪ್ರವೃತ್ತಿ ಅವನು ಬಿಡಬೇಕು, ಎನ್ನತಕ್ಕಂತಹ ದೃಷ್ಟಿಯಿಂದ ನಾವು ದಂಡ ಹಾಕುತ್ತೇವೆ. ಜುಲ್ಮಾನೆ ಹಾಕುತ್ತೇವೆ. ಶಿಕ್ಷೆ ಏಕೆ ವಿಧಿಸುತ್ತೇವೆ, ಸ್ವಲ್ಪ ನಾಚಿಕೆ ಹೆಚ್ಚಿಗೆ ಇರತಕ್ಕಂತಹವರು ಶಿಕ್ಷೆ ಆಗಿ ಜೈಲಿಗೆ ಹೋಗುವುದು ಎಂದರೆ, ನಾಗರೀಕ ಸಮಾಜದಲ್ಲಿ ನಾಚಿಕೊಳ್ಳುತ್ತಾರೆ ಎಂದು. ಇವರು 1960ನೇ ಇಸವಿಯಲ್ಲಿ ನಿಗದಿ ಮಾಡಿದ್ದು ಪುನರ್ ವಿಮರ್ಶೆ ಮಾಡಬೇಕೆಂದು ಹೇಳುತ್ತಾರೆ. ನಮ್ಮ ಎಲ್ಲ ಸಹೋದ್ಯೋಗಿಗಳು ಹೇಳಿದಂತೆ ನಿಮ್ಮ ಇಲಾಖೆಯವರಾದರೂ ವೈಜ್ಞಾನಿಕವಾಗಿ ಆಲೋಚನೆ ಮಾಡಿ ಯಾವ ಯಾವ

ಸ್ವರೂಪದ ಅಪರಾಧವನ್ನು, ಯಾವ ಯಾವ ವಿಧವಾದ ಅಪರಾಧವನ್ನು ಮಾಡಿದಾಗ ಎಷ್ಟು ಜುಲ್ಮಾನೆ ಹಾಕಬೇಕು ಎನ್ನುವುದನ್ನು ಅವರು ಕೂಲಂಕುಷವಾಗಿ ಚರ್ಚೆ ಮಾಡಿ ಆ ಪ್ರವೃತ್ತಿಯನ್ನು ತಡೆಗಟ್ಟುವುದಕ್ಕಾಗಿ ಈ ಶಾಸನವನ್ನು ತರಬೇಕಾಗಿತ್ತು. ಇದರ ವಿಚಾರದಲ್ಲಿ ಕಾನೂನು ಇಲಾಖೆಯವರು ಪೂರ್ಣ ಆಲೋಚನೆ ಮಾಡಿ ತಮ್ಮ ಬುದ್ಧಿವಂತಿಕೆಯನ್ನು ಖರ್ಚು ಮಾಡಿ ನಿಮಗೆ ಅವರು ಸಲಹೆ ಕೊಡಬೇಕಾಗಿತ್ತು. ನನಗೆ ಅರ್ಥವೇ ಆಗುವುದಿಲ್ಲ. ಈ ಕಾನೂನು ಇಲಾಖೆಗೆ ಮತ್ತು ಪಾರ್ಲಿಮೆಂಟರಿ ಅಫೇರ್ಸ್ ಡಿಪಾರ್ಟ್‌ಮೆಂಟ್‌ಗೆ ಒಂದು co-ordination ಇದೆಯೋ ಇಲ್ಲವೋ ಎಂದು. Different departments ನವರಿಗೆ ಅವರಿಗೆ legal knowledge ಇರಬೇಕೆಂದು ನಾನು expect ಮಾಡುವುದಿಲ್ಲ. ಅದಕ್ಕಾಗಿ ಪ್ರತ್ಯೇಕವಾಗಿ ಒಂದು ಇಲಾಖೆ ಇದ್ದಾಗ, ಅಲ್ಲಿ opinion branch ಇದ್ದಾಗ, ಅವರು ಏನು ಮಾಡುತ್ತಾರೆ ಅಂತ. ಬಹುಶಃ ಯಾರೂ ತಪ್ಪು ತಿಳಿದುಕೊಳ್ಳಬಾರದು. With due respect to people of the Law department, ಎಲ್ಲೂ ಕೆಲಸಕ್ಕೆ ಬಾರದವರನ್ನು ತಂದು ಅಲ್ಲಿ ಹಾಕುತ್ತಾರಾ ಎಂದು ಅನ್ನಿಸುತ್ತದೆ. ಇಲ್ಲದೇ ಹೋದರೆ ಈ ತರಹದ irresponsible ಬಿಲ್‌ಗಳನ್ನು ತಂದು House ನಲ್ಲಿ present ಮಾಡುತ್ತಾರಾ? ನನಗೆ ಮೇಲ್ನೋಟಕ್ಕೆ ಕಾಣುತ್ತದೆ. It is apparent. ಎಷ್ಟು ಅವಿವೇಕತನ ಇದೆ ಅಂತ. ಬಹುಶಃ ಅವರ ಅಂದಾಜಿನಲ್ಲಿ ಈ ಸದನದಲ್ಲಿ ಇದನ್ನೆಲ್ಲ ಆಲೋಚನೆ ಮಾಡಿ, ಚರ್ಚೆ ಮಾಡಿ ವಿಮರ್ಶೆ ಮಾಡುವ ಯೋಗ್ಯತೆ ಇರತಕ್ಕಂತಹವರು ಯಾರೂ ಇಲ್ಲ. ನಾವು ಏನು ಬರೆದು ಕೊಟ್ಟರೂ ಆಗುತ್ತದೆ ಅಂತ ಇರಬಹುದು. ಅಥವಾ ಅವರ ತಿಳುವಳಿಕೆ ಮಟ್ಟ ಅಷ್ಟೇ ಅಂತಲಾದರೂ ಆಗಿರಬಹುದು. ಎರಡರಲ್ಲಿ ಒಂದು ಸತ್ಯ ಆಗಿರಬೇಕು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ನಾವು ಯಾವುದೇ ಚರ್ಚೆ ಮಾಡದೇ ಒಂದು ಬಿಲ್ಲನ್ನು ತರುವ ಅವಶ್ಯಕತೆ ಇಲ್ಲ. ಏಕೆಂದರೆ, ಈ ಬಿಲ್ಲಿನ ಬಗ್ಗೆ ಈಗಾಗಲೇ ಕಾನೂನು ಇಲಾಖೆಯಲ್ಲಿ ಚರ್ಚೆಯಾಗಿದೆ. ನಮ್ಮಲ್ಲಿರುವಂತಹ ಹಿರಿಯ ಅಧಿಕಾರಿಗಳ ಜೊತೆಯಲ್ಲಿಯೂ ಚರ್ಚೆ ಮಾಡಿದ್ದೇವೆ. ಮಾನ್ಯ ರಮೇಶ್‌ಕುಮಾರ್ ಸಾಹೇಬರಿಗೂ, ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೂ ಗೊತ್ತಿದೆ. ನಮ್ಮ ಕಾರವಾರದ ಶಾಸಕರಾದ ಮಾನ್ಯ ವಿಶ್ವೇಶ್ವರಯ್ಯ ಹೆಗಡೆಯವರೂ ಹೇಳಿದ್ದಾರೆ. ಮೂಲಭೂತ ಸೌಕರ್ಯಕ್ಕಾಗಿ ಸುಮಾರು 60 ಕೋಟಿ ರೂಪಾಯಿಗಳನ್ನು

ಅಲ್ಲಿ ಇನ್‌ವೆಸ್ಟ್ ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿ ಒಂದು ದಿನಕ್ಕೆ ಎಷ್ಟು ಐರನ್ ಓರ್ ಹೊರಗಡೆ ಹೋಗುತ್ತಿದೆ, ಸಣ್ಣ ಪುಟ್ಟ ಬಡವರಿಗೆ ಯಾರಿಗೂ ನಾವು ತೆರಿಗೆ ಹಾಕುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ತಾವು ಸರ್ಕಾರ ನಡೆಸುವವರು ತಾಳ್ಮೆಯಿಂದ ಇರಬೇಕು. ನೀವು ಇನ್ನು ಹೆಚ್ಚು ಪ್ರಪೋಸ್ ಮಾಡಿದರೂ ನಾವು ಒಪ್ಪಿಕೊಳ್ಳುತ್ತೇವೆ. ನಾನು ಏನು ಹೇಳುತ್ತೇನೆಂದರೆ, ಇದಕ್ಕಿಂತ ಹೆಚ್ಚು ದಂಡ ವಿಧಿಸಿದರೂ ನಮಗೆ ಖುಷಿ. ನಾನು ಏನು ಹೇಳುತ್ತೇನೆಂದರೆ, ಪಿಕ್ ಪಾಕೆಟ್ ಮಾಡಿದವನಿಗೆ ಏನು ಶಿಕ್ಷೆ ಕೊಡಬೇಕು? ಸೈಕಲ್ ಇದ್ದರೆ ಏನು ಶಿಕ್ಷೆ ಕೊಡಬೇಕು? ಹಾಡು ಹಗಲು ಹೋಗಿ ದರೋಡೆ ಮಾಡಿದರೆ ಅವನಿಗೆ ಏನು ಶಿಕ್ಷೆ ಕೊಡಬೇಕು? ಅಪರಾಧದ ಸ್ವರೂಪ ಏನಿದೆ ಅದನ್ನು ಅವಲಂಬಿಸಿ ದಂಡ ಹಾಕಬೇಕು. ಅದರ ಬಗ್ಗೆ ನೀವು ವಿವರಣೆ ಕೊಡಬೇಕು. ಜಾಸ್ತಿ ದಂಡ ಹಾಕುವುದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಅವರಿಗೆಲ್ಲ ದಂಡ ಹಾಕಿ ವಸೂಲಿ ಮಾಡಿ ಪೋರ್ಟ್ ಅಭಿವೃದ್ಧಿ ಮಾಡುತ್ತೇವೆಂದರೆ, we will be the happiest people. ನಾವೆಲ್ಲರೂ welcome ಮಾಡುತ್ತೇವೆ. ನಿಮಗೆ ಸಹಕಾರವೂ ಕೊಡುತ್ತೇವೆ. ನಾವು ನಿಮಗೆ ಏನು ಹೇಳುತ್ತೇನೆಂದರೆ, ನಿಮ್ಮವರು ಆಲೋಚನೆ ಮಾಡಿಲ್ಲ. ಈ ಅಪರಾಧಕ್ಕೆ ಇಷ್ಟು ಜುಲ್ಮಾನೆ. ಇದನ್ನು ದಾಟಿ ಇನ್ನೊಂದು ದೊಡ್ಡ ಅಪರಾಧ ಮಾಡಿದರೆ ಅದಕ್ಕೆ ಎಷ್ಟು ಜುಲ್ಮಾನೆ ಎಂದು ಹೇಳದೇ ಸಾರಾಸಗಟಾಗಿ ಇಷ್ಟರಿಂದ ಇಷ್ಟಕ್ಕೆ ಏರಿಸಿದ್ದೇವೆ. 1960ರಲ್ಲಿ ಕಡಿಮೆ ಇತ್ತು ಎಂದರೆ, ಅದು ಅವೈಜ್ಞಾನಿಕ. ನಿಮ್ಮವರು ಇದರಲ್ಲಿ ಸರಿಯಾಗಿ ತಮ್ಮ ಕೆಲಸವನ್ನು ನಿರ್ವಹಿಸಿಲ್ಲ ಎನ್ನತಕ್ಕಂಥದ್ದು ನಮ್ಮ ಮಾತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ನಾನೂ ಅದನ್ನೇ ಹೇಳಿದು. ಇಂತಹ ತಪ್ಪನ್ನು ಮಾಡಿದರೆ, ಇಂತಹ ಪೆನಾಲ್ಟಿ ಎಂದು ನಿಗದಿಪಡಿಸಿ. ಇದಕ್ಕಿಂತ ಜಾಸ್ತಿಯಾಗುತ್ತದೆ. ಅಲ್ಲಿ ಕಡಿಮೆ ಏನೂ ಆಗುವುದಿಲ್ಲ. ಅಲ್ಲಿ Ships ಬರುವುದೆಲ್ಲ ಮೈನ್ಸ್ ಗ್ರಾನೈಟ್ ಮತ್ತು ಮೊಲಾಸಿಸ್ ಬಿಟ್ಟರೆ ಬೇರೆ ಯಾವುದೂ ಬರುವುದಿಲ್ಲ. ಚಿಕ್ಕ ಪುಟ್ಟ ವಸ್ತುಗಳು ಅಲ್ಲಿಗೆ ಹೋಗುವುದಿಲ್ಲ. ಅದಕ್ಕೆ landing and berthing fees ಜಾಸ್ತಿ ಮಾಡಿ. ನೀವು dredging ಮಾಡಿಕೊಟ್ಟು landing and berthing fees ಜಾಸ್ತಿ ಮಾಡಿದರೆ ಇನ್ನು ಆದಾಯ ಜಾಸ್ತಿಯಾಗುತ್ತದೆ. ಅಲ್ಲಿ dredging ಮಾಡಲಿಲ್ಲ, ಇವರು high sea ಯಲ್ಲಿ wait ಮಾಡಿ ಬೇರೆ ಕಡೆ

ಹೋಗಿ ಲೋಡ್ ಮಾಡುವ ಪರಿಸ್ಥಿತಿ ಇದೆ. ಅದನ್ನು change ಮಾಡಲಿಕ್ಕೋಸ್ಕರ ನೀವು ಡ್ರಜ್ಜಿಂಗ್ ಮಾಡಿಸಿ ಪೋರ್ಟ್‌ನಲ್ಲಿ ಬೇರೆ ship ನ್ನು ಭರ್ತಿ ಮಾಡಬೇಕು. ಅದನ್ನು ಮಾಡಿದಾಗ ಆದಾಯ ಜಾಸ್ತಿಯಾಗುತ್ತದೆ. ಪೆನಾಲ್ಟಿಯಲ್ಲಿ ನಿಮಗೆ ಖಂಡಿತ ಸಿಗುವುದಿಲ್ಲ. ಏಕೆಂದರೆ ಅವರಿಗೆ ಹೆದರಿಸಿ ಇವರೇ ತೆಗೆದುಕೊಂಡು ಸುಮ್ಮನೆ ಕುಳಿತು ಬಿಡುತ್ತಾರೆ. ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. 60 ಕೋಟಿ ರೂಪಾಯಿಗಳಲ್ಲಿ ಸ್ವಲ್ಪ ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದೀರಿ, ಖಂಡಿತ ಒಳ್ಳೆಯದು. ನಮ್ಮ cheapest mode of transportation is seaway. ಅದನ್ನು ಮಾಡಬೇಕಾಗುತ್ತದೆ. ಒಂದು ವೇಳೆ ನೀವು Port Authority ಯನ್ನು ಮಾಡಿದರೆ ಗುಜರಾತ್‌ನಲ್ಲಿ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ Minor Ports ಗಳನ್ನು ಯಾವ ರೀತಿಯಾಗಿ ಡೆವಲಪ್ ಮಾಡಿದ್ದರೆ ಅದೇ ರೀತಿ ಇದನ್ನೂ ಡೆವಲಪ್ ಮಾಡುವುದಕ್ಕೆ ಅವಕಾಶವಾಗುತ್ತದೆ. ದಯವಿಟ್ಟು ಅದನ್ನು ಮಾಡಿ.

ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ) :– ಮಾನ್ಯ ಅಧ್ಯಕ್ಷರೆ, ಪೋರ್ಟ್ ವಿಚಾರ ಬಂದಿರುವುದರಿಂದ ನಾನು ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ನಮ್ಮ ಭಾರತ ದೇಶದಲ್ಲಿ, ಕರ್ನಾಟಕದಲ್ಲಿ ಗಣಿ ಉತ್ಪನ್ನವೇನಿದೆ ಅದನ್ನು ಚೈನ್ನೈ ಮುಖಾಂತರ, ಗೋವಾ ಮತ್ತು ಮಂಗಳೂರು ಮುಖಾಂತರ ಕಳುಹಿಸುತ್ತೇವೆ. ಇದಲ್ಲದೇ ಕಾರವಾರ ಬಿಳಿಕೆರೆಯಿಂದ ಕಳುಹಿಸುತ್ತೇವೆ. ಇವತ್ತು ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಐರನ್ ಓರ್ ಏನಿದೆ ಇದರಿಂದ ನಮ್ಮ ಕರ್ನಾಟಕದ ಪೋರ್ಟ್‌ಗಳಿಗೆ ಹೆಚ್ಚು ಆದಾಯ ಬರುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಆದರೆ ಅಲ್ಲಿ ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಕೇವಲ ಒಬ್ಬ ಪೋರ್ಟ್ ಡೈರಕ್ಟರ್ ಮಾತ್ರ ಇದ್ದಾರೆ. ಅದೊಂದು ಡೈರಕ್ಟರ್ ಆಫ್ ಪೋರ್ಟ್ ಎಂದು ಆದರೆ, ಇವತ್ತು ನಾವೇನು ಮಂಗಳೂರು ಪೋರ್ಟ್ ಇದೆ, ಅದು ನಮ್ಮ ಕೇಂದ್ರ ಸರ್ಕಾರಕ್ಕೆ ಸೇರಿರುವುದು. ನಮ್ಮ ರಾಜ್ಯ ಸರ್ಕಾರಕ್ಕೆ ಸೇರಿರುವುದು ಯಾವುದೆಂದರೆ ಬಿಳಿಕೆರೆ ಮತ್ತು ಕಾರವಾರ. ಅಲ್ಲಿ ಇವತ್ತು ಸುಮಾರು ಆರೂವರೆಯಿಂದ ಏಳು ಮೀಟರ್ ಡ್ರಾಫ್ ಇದೆ. ಅದನ್ನು ಸುಮಾರು 13 ಡ್ರಾಫ್ ವರೆಗೆ ಅದನ್ನು dredge ಮಾಡಬಹುದು ಸಾರ್. ಅದನ್ನು ಮಾಡಿದರೆ ಇವತ್ತು ಉತ್ತರ ಕರ್ನಾಟಕದಲ್ಲಿ ನೀವೇನು ಇವತ್ತು ಸಣ್ಣ ಕೈಗಾರಿಕೆ ಮತ್ತು ಗಾರ್ಮೆಂಟ್ ಇಂಡಸ್ಟ್ರಿಗಳನ್ನು ಡೆವಲಪ್ ಮಾಡಬೇಕು, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಿಗೆ ಇವತ್ತು ಬಿಳಿಕೆರೆ ಪೋರ್ಟ್ ಬಹಳ ಅನುಕೂಲವಾದಂಥ ಪೋರ್ಟ್ ಆಗಿದೆ. ಅಲ್ಲಿ

ಸಾಧಾರಣ ಸಣ್ಣ ಹಡಗುಗಳು ಮತ್ತು ಈ Container Terminal ಆಗಬೇಕು. Container Terminal ಆದರೆ ಬಹಳಷ್ಟು ಇವತ್ತು ಅನುಕೂಲವಾಗುತ್ತದೆ. ಇವತ್ತು ಕೈಗಾ ಪೋರ್ಟ್ ಬಂದಿದೆ. ಬಿಳಿಕೆರೆಯಲ್ಲಿಯೂ ಕೂಡ dredging facility ಆದರೆ, ನಮ್ಮ ರಾಜ್ಯ ಆ ಬಗ್ಗೆ ಸ್ವಲ್ಪ ಗಮನ ಕೊಟ್ಟು ವಿಚಾರವನ್ನು ಮಾಡಿದರೆ ನಮ್ಮ ಕರ್ನಾಟಕ ರಾಜ್ಯದ್ದೇ ಒಂದು ಮುಖ್ಯವಾದ ಪೋರ್ಟ್ ಆಗುತ್ತದೆ ಎಂದು ತಮ್ಮ ಗಮನಕ್ಕೆ ಈ ವಿಚಾರವನ್ನು ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ, ಬಂದರು ಖಾತೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಈ ನಾಲ್ಕು ಪೋರ್ಟ್‌ಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸುಮಾರು 700 ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಕಳುಹಿಸಿಕೊಟ್ಟಿದ್ದೇನೆ. ಆದರೆ ಕೊಚ್ಚಿನ್‌ನಲ್ಲಿ ಮಾನ್ಯ ಭೂ ಸಾರಿಗೆ ಸಚಿವರ ಸಭೆ ನಡೆದಂಥ ಸಂದರ್ಭದಲ್ಲಿ ನಾವು ಯಾವುದೇ ಪೋರ್ಟ್ ಇಂಪ್ರೂವ್‌ಮೆಂಟ್‌ಗೆ ದುಡ್ಡನ್ನು ಕೊಡುವುದಿಲ್ಲ, ನೀವು ಖಾಸಗಿ ಸಹಭಾಗಿತ್ವದೊಡನೆ ಮಾಡಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಮೇಲೆಯೇ ಈಗಾಗಲೇ ನಮ್ಮ ಕಾರ್ಯದರ್ಶಿಗಳು ಮತ್ತು ನಮ್ಮ ಅಡ್ವೈಸರ್‌ಗಳು, ಇವರೆಲ್ಲ ಯಾವ ರೀತಿಯಾಗಿ ಇದನ್ನು ಮಾಡಬೇಕು ಎನ್ನುವುದರ ಬಗ್ಗೆ ಸದ್ಯದಲ್ಲಿಯೇ ತೀರ್ಮಾನವನ್ನು ಮಾಡಬೇಕು ಎಂದು ಆಲೋಚನೆಯನ್ನು ಮಾಡಿದ್ದೇವೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು, ಅನಿಲ್ ಲಾಡ್‌ರವರು ಮತ್ತು ನಮ್ಮ ರಮೇಶ್‌ಕುಮಾರ್‌ರವರು ಏನು ಹೇಳಿದ್ದಾರೆ ಅದನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಕಾರವಾರ ಪೋರ್ಟ್ ಏನಿದೆ ಅದನ್ನು ಇಂಪ್ರೂವ್ ಮಾಡುವುದಕ್ಕೆ ಖಾಸಗಿ ಅಥವಾ ಕೇಂದ್ರ ಸರ್ಕಾರದ ಸಹಯೋಗದೊಡನೆ ಮಾಡಬೇಕೆಂದು ನಾವು ಈಗಾಗಲೇ ತೀರ್ಮಾನವನ್ನು ಮಾಡಿದ್ದೇವೆ. ಕಾರವಾರ ಮತ್ತು ಮಂಗಳೂರು ಪೋರ್ಟ್ ಎರಡಕ್ಕೂ ಮೂಲಭೂತ ಸೌಕರ್ಯಕ್ಕೇ ಸುಮಾರು 60 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇದನ್ನು ಮಾಡುವಾಗ ನಿಯಮ ಉಲ್ಲಂಘನೆ ಮಾಡಿದ ಐರನ್ ಓರ್ ಹಡಗಿನವರು 1 ಲಕ್ಷ ರೂಪಾಯಿ ಪೆನಾಲ್ಟಿ ಕಟ್ಟಿದರೆ ಅವರಿಗೇನಾಗುತ್ತದೆ? ಈಗಾಗಲೇ ಈ ಹಿಂದೆ 1960 ರಲ್ಲಿ ಮಾಡಿರುವ ನಿಯಮ ಇದು. ಈಗ ಮಾಡುತ್ತಿರುವ ನಿಯಮದಿಂದ ಸಣ್ಣ ಪುಟ್ಟ ಬಡವರಿಗೆ ಏನೂ ತೊಂದರೆಯಾಗುವುದಿಲ್ಲ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ ಪೋರ್ಟ್ ಇಂಪ್ರೂವ್‌ಮೆಂಟ್‌ಗಾಗಿ ಮೂಲಭೂತ ಸೌಕರ್ಯಗಳನ್ನು ಏನು ಮಾಡಬೇಕೋ ಅದನ್ನು ಮಾಡಬೇಕು ಪ್ರಾಮಾಣಿಕವಾದ

ಪ್ರಯತ್ನಗಳನ್ನು ನಾನು ಮಾಡುತ್ತೇನೆ. ಅದಕ್ಕೂ ಮುಂಚೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರನ್ನು ಮತ್ತು ಆ ಭಾಗದ ಶಾಸಕರನ್ನು ಒಂದು ಸಭೆಗೆ ಕರೆದು ಯಾವ ರೀತಿಯಾಗಿ ಈ ಪೋರ್ಟ್‌ಗಳನ್ನು ಇಂಪ್ರೂವ್‌ಮೆಂಟ್ ಮಾಡುವುದು, ಖಾಸಗಿ ಲೆವಲ್‌ನಲ್ಲಿ ಮಾಡುವುದೇ? ಏಕೆಂದರೆ ಕೇಂದ್ರ ಸರ್ಕಾರ ಈಗಾಗಲೇ ಮಾಡುವುದಕ್ಕೆ ಆಗುವುದಿಲ್ಲವೆಂದು ನಮಗೆ ತಿಳಿಸಿದ್ದಾರೆ. ಆದುದರಿಂದ ಆ ಭಾಗದ ಶಾಸಕರ ಅಭಿಪ್ರಾಯಗಳೇನು ಎಂಬುದನ್ನು ತಿಳಿದುಕೊಂಡು ನಾವು ಮಾಡುತ್ತೇವೆ. ಇದನ್ನು ಮಾಡುವುದರಿಂದ ಬಡ ಜನರಿಗೆ ಮತ್ತು ಸ್ಥಳೀಯ ಜನರಿಗೆ ಯಾವ ತೊಂದರೆಯೂ ಆಗುವುದಿಲ್ಲ. ಆದುದರಿಂದ ದಯಮಾಡಿ ಈ ವಿಧೇಯಕಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :– ಮಾನ್ಯ ಅಧ್ಯಕ್ಷರೆ, ರೇವಣ್ಣನವರು ಹೇಳಿದ ಹಾಗೆ ಆ ಪೋರ್ಟ್‌ನ್ನೂ ಕೂಡ ಡೆವಲಪ್ ಮಾಡಬೇಕು. ನಾನು ಒಮ್ಮೆ ಹುಬ್ಬಳ್ಳಿಯಿಂದ ಮಂಗಳೂರಿಗೆ ಹೋದೆ. ಹೊಸದಾಗಿ ರಸ್ತೆ ಮಾಡಿದ್ದರು. ಈಗ ಹೋಗಿ ನೋಡಿದರೆ ಅದು ರಸ್ತೆ ಅಲ್ಲ, ಅದೊಂದು ಹಳ್ಳಿ ರಸ್ತೆಗಿಂತಲೂ ಹೆಚ್ಚು ಹಾಳಾಗಿದೆ. ಇನ್ನೊಂದು ವಿಷಯ ತಮಗೇನು ಹೇಳಬಯಸುತ್ತೇನೆಂದರೆ ನೀವು ಪೋರ್ಟ್ ಡೆವಲಪ್ ಮಾಡುವುದರ ಜೊತೆಗೆ ಎಲ್ಲೆಲ್ಲಿ ಐರನ್ ಓರ್ 40 ಟನ್ ಹೆವಿಲೋಡ್ ಕೆಪ್ಯಾಸಿಟಿ ಇರುವಂಥ ಲಾರಿಗಳು ಹೋಗುತ್ತದೆಯೋ ಆ ರಸ್ತೆಗಳನ್ನು ವಿಶೇಷವಾಗಿ ಮಾಡಬೇಕು. ಕೇವಲ ಹೈ ಸ್ಪೀಡ್ ಹೋಗತಕ್ಕಂಥ ರಸ್ತೆಗಳೇ ಒಂದು ತರಹದ್ದು ಇದ್ದರೆ, ಅದೇ ರೀತಿ ಹೆವಿಲೋಡ್ ವೆಹಿಕಲ್ ಹೋಗುವುದಕ್ಕೇ ವಿಶೇಷವಾದ ರಸ್ತೆ ಮಾಡಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಅಲ್ಲಿಯ ಸ್ಥಳೀಯ ಜನರಿಗೆ ತೊಂದರೆಯಾಗುತ್ತದೆ. ಇದಕ್ಕೇನಾದರೂ ಮಾಡುವಂಥದ್ದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಶ್ರೀನಿವಾಸಗೌಡರೆ, ಹುಬ್ಬಳ್ಳಿಯಿಂದ ಕಾರವಾರಕ್ಕೆ ಹೋಗುವ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಬರುತ್ತದೆ. ಅದೇ ನಮ್ಮ ಕಡೆ ಹಾಸನದಿಂದ ಮಂಗಳೂರಿಗೆ ಹೋಗುವ ಹೆದ್ದಾರಿ ಕೂಡ ರಾಷ್ಟ್ರೀಯ ಹೆದ್ದಾರಿಗೆ ಬರುತ್ತದೆ. ಅಲ್ಲಿ ದಿನಕ್ಕೆ 5 ಸಾವಿರ ಮೈನ್ಸ್ ಲಾರಿಗಳು ಹೋಗುತ್ತಿವೆ. ಹುಬ್ಬಳ್ಳಿಯಿಂದದ ಕಾರವಾರದ ರಸ್ತೆಯಲ್ಲಿಯೂ ಕೂಡ 5 ಸಾವಿರ ಲಾರಿಗಳು ಹೋಗುತ್ತವೆ. 5 ಸಾವಿರ ಲಾರಿಗಳು ಹೋಗುವಾಗ ಪೋರ್ಟ್‌ಗೆ ಮತ್ತು ನ್ಯಾಶನಲ್ ಹೈವೇಗೂ ಸಂಬಂಧ ಬರುವುದಿಲ್ಲ. ನ್ಯಾಶನಲ್ ಹೈವೇ ಅಥಾರಿಟಿಗೆ ಬರುತ್ತದೆ, ಕೇಂದ್ರ

ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದುದರಿಂದ ಸ್ಟೇಟ್ ಹೈವೇ ರಸ್ತೆಗಳಲ್ಲಿ ಕೆಲವು ಕಡೆ ಏನು ಐರನ್ ಓರ್ ಲಾರಿಗಳು ಹೋಗುತ್ತಿವೆ ಅದರ ಬಗ್ಗೆ ಈಗಾಗಲೇ ನಾನು ಮತ್ತು ನಮ್ಮ ಕಾರ್ಯದರ್ಶಿಗಳೆಲ್ಲಾ ಮೀಟಿಂಗ್ ಮಾಡಿ ಚಿಂತನೆಯನ್ನು ಮಾಡಿದ್ದೇವೆ. ಅಂಥ ಕಡೆಗಳಲ್ಲಿ ಟೋಲ್ ಮಾಡುವುದಕ್ಕೆ ನಮಗೆ ಅವಕಾಶವಿದೆ. ಆದುದರಿಂದ ಅಲ್ಲಿ ಟೋಲ್ ಮಾಡಬೇಕೆನ್ನುವ ಚಿಂತನೆ ಇದೆ.

ಶ್ರೀ ಶಿವಾನಂದ ಪಾಟೀಲ್ :– ಓವರ್ ಲೋಡಿಂಗ್ ಕಂಟ್ರೋಲ್ ಮಾಡುವ ಸಲುವಾಗಿ ಏನು ಮಾಡಿದ್ದೀರಿ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ಓವರ್ ಲೋಡಿಂಗ್ ಬಗ್ಗೆ ನಾನು ಮತ್ತು ಸಾರಿಗೆ ಸಚಿವರು ಮತ್ತು ಟ್ರಾನ್ಸ್‌ಪೋರ್ಟ್ ಕಮಿಶನರ್ ಸೇರಿ ಮೀಟಿಂಗ್ ಮಾಡಿದ್ದೇವೆ. ಸಾರಿಗೆ ಸಚಿವರು ಕ್ರಮ ತೆಗೆದುಕೊಳ್ಳಬೇಕು. ಆದುದರಿಂದ ಈ ಓವರ್‌ಲೋಡಿಂಗ್ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ನಾನು ಸಾರಿಗೆ ಸಚಿವರ ಜೊತೆ ಮಾತನಾಡುತ್ತೇನೆ.

ಶ್ರೀ ಶಿವಾನಂದ ಪಾಟೀಲ್ :– ಯಾರು ಕ್ರಮ ತೆಗೆದುಕೊಂಡಿದ್ದಾರೆ? ಎಲ್ಲವನ್ನೂ ಕೇವಲ ನೀವು ಹೇಳುತ್ತಲೇ ಹೋಗುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ :– ನನ್ನ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಶಿವಾನಂದ ಪಾಟೀಲ್ :– ನಿಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದರೆ ಹೋಗಲಿ. RTO Department Minister ಅವರು ನಿಮ್ಮ colleague ಅಲ್ಲವೆ? ಇದೀಗ ತಾನೆ ಅವರೇ ಬರುತ್ತಿದ್ದಾರೆ. ಅವರ ಕಡೆಯಿಂದಲಾದರೂ ಈ ಬಗ್ಗೆ ಹೇಳಿಸಿ. 30 ಟನ್ 40 ಟನ್ ಹೇರಿಕೊಂಡು ಆ ರಸ್ತೆಯಲ್ಲಿ ಹೋದರೆ ಆ ರಸ್ತೆ ಎತಕ್ಕೆ ಬರುತ್ತದೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ಈಗ ಓವರ್‌ಲೋಡಿಂಗ್ ಬಗ್ಗೆ ಈಗಾಗಲೇ ಸಾರಿಗೆ ಸಚಿವರ ಜೊತೆ ಎರಡು ಸುತ್ತಿನ.. ಮಾತುಕತೆ ಮಾಡಿದ್ದೇವೆ.

ಶ್ರೀ ಶಿವಾನಂದ ಪಾಟೀಲ್ :– ನಿಮ್ಮ ಪಕ್ಕದಲ್ಲಿಯೇ ಅವರು ಬಂದು ನಿಂತಿದ್ದಾರೆ. ಅವರ ಕಡೆಯಿಂದ ಉತ್ತರ ಹೇಳಿಸಿ.

ಶ್ರೀ ಕೆ. ಕೃಷ್ಣಮೂರ್ತಿ :– ಶಿವಾನಂದರವರೆ ಈಗ ಅದು ಯಾರ ವ್ಯಾಪ್ತಿಗೆ ಬರುತ್ತದೆ ಎನ್ನುವ ವಿಚಾರ ಬೇಡ. ಈಗ ಕಡೂರು–ಮಂಗಳೂರು ರೋಡ್‌ನಲ್ಲಿ ಪ್ರತಿ ದಿವಸ 250 ರಿಂದ 350 ಲಾರಿಗಳು ಏನು ಮಲ್ಟಿ ಆಕ್ಸಲ್ ಇವೆ ಅದರಲ್ಲಿ 40

ರಿಂದ 50 ಟನ್ ಐರನ್ ಓರ್ ಹೋಗುತ್ತಿದೆ. ಕೆಂಗಲ್ ಹನುಮಂತಯ್ಯನವರು ಸುಮಾರು 75 ಕಿ.ಮೀ ಸಿಮೆಂಟ್ ರೋಡ್‌ನ್ನು 1952ನೇ ಇಸವಿಯಲ್ಲಿ ಮಾಡಿಸಿದ್ದರು. ಇವತ್ತು ಆ ಸಿಮೆಂಟ್ ರೋಡ್ ಕೂಡ ಇಲ್ಲ. ಅದು ರೇವಣ್ಣನವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ರೇವಣ್ಣನವರು ಅಲ್ಲಿ ಓಡಾಡಿದ್ದಾರೆ. ಚಿಕ್ಕನಗಳೂರು ರೋಡ್‌ನಲ್ಲಿ ಮಲ್ಟಿ ಆಕ್ಸಲ್ ಗಾಡಿಗಳೇನಿವೆ ಅದಕ್ಕೆ ಕಡಿವಾಣ ಹಾಕುವುದಕ್ಕೆ ಏನಾದರೂ ಒಂದು ಕಾನೂನನ್ನು ದಯವಿಟ್ಟು ನಮ್ಮ ರಾಜ್ಯ ಸಾರಿಗೆ ಸಚಿವರು ಮಾಡಬೇಕು. ಈ ಲಾರಿಗಳು ಗ್ರಾಮೀಣ ಪ್ರದೇಶದ ರಸ್ತೆಗಳ ಮೇಲೂ ಓಡಾಡುವುದರಿಂದ ಅಲ್ಲಿಯೂ ನಾವು ನಬಾರ್ಡ್‌ನಿಂದ ಸಾಲವನ್ನು ಪಡೆದು ರಸ್ತೆಗಳನ್ನು ಏನು ಮಾಡಿದ್ದೇವೆ ಆ ರಸ್ತೆಗಳು ಇವತ್ತು ಒಂದೂ ಚೆನ್ನಾಗಿ ಉಳಿದಿಲ್ಲ. ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಲೋಕೋಪಯೋಗಿ ಸಚಿವರು ಹೇಳುವುದು, ಸಾರಿಗೆ ಸಚಿವರು ಸುಮ್ಮನೇ ಇರುವುದು, ಆದರೆ ಗ್ರಾಮೀಣ ಪ್ರದೇಶದಲ್ಲಿ ನಬಾರ್ಡ್ ಸಾಲದಿಂದ ಮಾಡಿದ ರಸ್ತೆಗಳ ಗತಿಯೇನು? ಅದರ ಮೇಂಟೆನೆನ್ಸ್ ಮಾಡುವವರಾರು?

ಶ್ರೀ ಬಿ. ಶಿವರಾಮು :– ಸಾರಿಗೆ ಸಚಿವರೆ, ನೀವು ಅಲ್ಲಿಂದ ತಿರುಗಾಡಿಕೊಂಡು ಬರುತ್ತಿದ್ದೀರಿ ಹೊರತು ಇದರ ಬಗ್ಗೆ ನೀವು ಗಮನವನ್ನೇ ಹರಿಸಲಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ :– ಕೌನ್ಸಿಲ್‌ನಿಂದ ಈಗ ಬಂದೆ. ರೇವಣ್ಣನವರು ಉತ್ತರ ಕೊಡುತ್ತಿದ್ದರಲ್ಲ. ಅದಕ್ಕಾಗಿ ಸುಮ್ಮನಿದ್ದೆ.

ಶ್ರೀ ಹೆಚ್.ಡಿ. ರೇವಣ್ಣ :– ಆಗಲೇ ಶ್ರೀನಿವಾಸಗೌಡರು ಏನು ಹೇಳಿದರೆಂದರೆ, ಅವರು ಹುಬ್ಬಳ್ಳಿಯಿಂದ ಕಾರವಾರಕ್ಕೆ ಹೋದಂಥ ಸಂದರ್ಭದಲ್ಲಿ ಅಲ್ಲಿ ಹೆಚ್ಚು ಹೆವಿ ಟ್ರಕ್, ಲಾರಿಗಳು ಹೋಗುತ್ತಿವೆ ಎಂದು ಹೇಳಿದ್ದಾರೆ. ಅದೇ ರೀತಿ ಕೃಷ್ಣಮೂರ್ತಿಯವರೂ ಕೂಡ ಹೇಳಿದರು. ಅದಕ್ಕಾಗಿ ಓವರ್‌ಲೋಡ್‌ನ್ನು ತಪ್ಪಿಸಬೇಕೆಂದರು. ಸಾರಿಗೆ ಸಚಿವರ ಗಮನಕ್ಕೆ ತರುತ್ತೇನೆ ಎಂದು ನಾನು ಹೇಳುತ್ತಿದ್ದೆ. ಅದರ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :– ಓವರ್‌ಲೋಡ್ ಬಗ್ಗೆ ಮ್ಯಾಕ್ಸಿಮಂ ಎಷ್ಟು ಸಾಧ್ಯವೋ ಅಷ್ಟು ಕಂಟ್ರೋಲ್ ಮಾಡಿದ್ದೇವೆ. ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸಲಹೆ ಕೊಟ್ಟಿದ್ದರೆ ಅದನ್ನೂ ತೆಗೆದುಕೊಳ್ಳೋಣ.

ಶ್ರೀ ಬಿ. ಶಿವರಾಮ್ :– ಹಾಸನದಿಂದ ಮಂಗಳೂರಿಗೆ ಹೆವಿ ಲಾರಿ ಒಂದು ದಿನಕ್ಕೆ 5 ಸಾವಿರ ಹೋಗುತ್ತದೆಂದು ಮಾನ್ಯ ರೇವಣ್ಣನವರೂ ಕೂಡ ಹೇಳಿದ್ದಾರೆ. ಅವರು ಹೇಳಿದ್ದರೂ ನೀವು ಈ ರೀತಿ ಹೇಳಿದರೆ ಹೇಗೆ?

ಶ್ರೀ ಎನ್. ಚೆಲುವರಾಯಸ್ವಾಮಿ :– ರೇವಣ್ಣನವರು ಹಿರಿಯ ಸಚಿವರು. ರೇವಣ್ಣನವರಿಗೆ ನಾವು ಕಡಿವಾಣ ಹಾಕುವುದಕ್ಕಾಗುತ್ತದೆಯೆ? ಶಿವರಾಮಣ್ಣ, ನೀನು ಹಾಸನದಲ್ಲಿ ಎಂ.ಎಲ್.ಎ. ಆಗಿದ್ದಿ. ಹಾಸನಕ್ಕೂ ನಮಗೂ ಒಂದೇ? ನಾವು ಮಂಡ್ಯದವರು.

ಶ್ರೀ ಬಿ. ಶಿವರಾಮ್ :– ಹಾಸನದ್ದನ್ನೇ ಅವರು ಈಗ ಹೇಳಿದ್ದು. ಹಾಸನದಿಂದ ಮಂಗಳೂರಿಗೆ ಸಕಲೇಶಪುರದ ಮೇಲೆ 5 ಸಾವಿರ ಲಾರಿ ಹೋಗುತ್ತದೆ ಎಂದು ಅವರೇ ಹೇಳಿದರು. ಅದೂ ಒಂದೊಂದು ಲಾರಿ 40 ಟನ್ ಮೇಲೆಯೇ ಲೋಡ್ ಆಗಿರುತ್ತದೆ. ಇನ್ನು ಎರಡು ತಿಂಗಳು ಹೀಗೆ ಹೋದರೆ ರಸ್ತೆ ಪೂರ್ತಿ ಹಾಳಾಗುತ್ತದೆ. ಯಾವುದರಿಂದ ಎಂದರೆ ನಿಮ್ಮ ಓವರ್‌ಲೋಡ್ ಲಾರಿಗಳಿಂದಲೇ. ಪ್ರತಿ ದಿನ 5 ಸಾವಿರ ಲಾರಿ,,,

ಶ್ರೀ ಎನ್. ಚೆಲುವರಾಯಸ್ವಾಮಿ :– ಶಿವರಾಮಣ್ಣ, ಓವರ್‌ಲೋಡ್ ಬಗ್ಗೆ ಹೇಗಿತ್ತು, ಏನಿತ್ತು ಎಂಬ ಬಗ್ಗೆ ಎಲ್ಲ ವರದಿಯನ್ನೂ ತರಿಸಿಕೊಳ್ಳಿ. ನಮ್ಮ ಸರ್ಕಾರ ಯಾವ ಓವರ್‌ಲೋಡ್‌ನ್ನೂ ಸಹ ಬಿಟ್ಟಿಲ್ಲ. ಓವರ್‌ಲೋಡ್‌ನ್ನು ಕಂಟ್ರೋಲ್ ಮಾಡಿದ್ದೇವೆ. ಮಾನ್ಯ ಶಿವರಾಂ, overload ಬಗ್ಗೆ ಏನಿತ್ತು ಎನ್ನುವ ವರದಿ ತರಿಸಿಕೊಳ್ಳಿ. ನಮ್ಮ ಸರ್ಕಾರ ಯಾವ overload ಅನ್ನು ಬಿಟ್ಟಿಲ್ಲ. Mine overload ಅನ್ನು control ಮಾಡಿದ್ದೇವೆ. ಬೇರೆ ರೀತಿಯ, food ಅಥವಾ ಮರಳು ಹೋಗುತ್ತಿದ್ದರೆ ನಾವು ಅದನ್ನು control ಮಾಡುವುದಕ್ಕೆ ಆಗದೇ ಇರಬಹುದು.

ಮಾನ್ಯ ಸದಸ್ಯರು :– Granite ಲಾರಿಗಳು overload ಮಾಡಿಕೊಂಡು ಹೋಗುತ್ತವೆ, ಅದಕ್ಕೆ fine ಹಾಕುವುದಿಲ್ಲ.

ಶ್ರೀ ಕೆ.ಆರ್. ರಮೇಶ್ :– ತಾವು ಸಲಹೆ ಕೊಡಿ ಎಂದು ಹೇಳಿದಿರಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ :– ನಾನು ಏನು ಮಾಡಬಹುದು ಅದನ್ನು ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನೀವು ಮೊದಲು ಎಷ್ಟು ಇದ್ದಿರಿ, ಈಗ ಎಷ್ಟು ಆಗಿದ್ದೀರಿ, ಆದುದರಿಂದ ನಿಮ್ಮ load ಹೇಗೆ reduce ಮಾಡಿದಿರೋ ಹಾಗೆ ಅದನ್ನೂ ಮಾಡಿ.

ಶ್ರೀ ಎನ್. ಚಲುವರಾಯ ಸ್ವಾಮಿ :– ಖಂಡಿತವಾಗಿ ಮಾಡೋಣ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅಪೆರ load ಜಾಸ್ತಿಯಾಗಿದೆ. Load ಎಲ್ಲಿ ಕಡಿಮೆಯಾಯಿತು? ನೋಡಿ ಇದು ಚೆಲುವರಾಯ ಸ್ವಾಮಿ ಬೇಕೆಂದು ಅವಮಾನ ಮಾಡುತ್ತಿದ್ದಾರೆ. ಅವರ load ಜಾಸ್ತಿಯಾಗಿದೆ, ಕಡಿಮೆಯಾಗಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಈ overload ಹಾವಳಿ ತಡೆಯದೇ ಹೋದರೆ ಈ ರಾಜ್ಯದಲ್ಲಿ ಇರುವಂತಹ ಯಾವುದೇ ಲೋಕೋಪಯೋಗಿ ರಸ್ತೆಯಾಗಲಿ, ಜಿಲ್ಲಾ ಪಂಚಾಯತ್ ರಸ್ತೆಯಾಗಲಿ, National Highway ರಸ್ತೆಯಾಗಲಿ ಯಾವುದೂ ಉಳಿಯುವುದಿಲ್ಲ. ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸಾರಿಗೆ ಸಚಿವರಲ್ಲಿ ಮನವಿ ಮಾಡುತ್ತೇನೆ. ಇದರಲ್ಲಿ ದಯೆ–ದಾಕ್ಷಿಣ್ಯವಿಲ್ಲ. ಅವರು ಕಾನೂನಿಗೆ ಬೇಕಾದರೆ ಒಂದು ತಿದ್ದುಪಡಿಯನ್ನು ತರಲಿ.

ಶ್ರೀ ಬಿ. ಶಿವರಾಂ :– ಅವರು ಒಂದು ಮಾತು ಹೇಳಿದರು, ನೀವೇ ಹಿರಿಯ ಸಚಿವರು, ನೀವು ಸಲಹೆ ಕೊಟ್ಟರೆ ಏನು ಬೇಕಾದರೂ ಮಾಡುತ್ತೇವೆಂದು ಹೇಳಿದರು. ನೀವು ಸಲಹೆ ಕೊಟ್ಟು ಬೇಗ ಮಾಡಿಬಿಡಿ. ಮೊದಲು ನಿಮ್ಮ ರಸ್ತೆ ಉಳಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ಇದು ವಿಷಯಾಂತರವಾಯಿತು.

ಅಧ್ಯಕ್ಷರು :– ಮಾನ್ಯ ಮಂತ್ರಿಗಳು ಈ ಬಿಲ್ pass ಮಾಡಿಕೊಡಿ ಎಂದು ಕೇಳಿ, ಉಳಿದ ಕತೆಯನ್ನೆಲ್ಲಾ ಹೇಳುತ್ತೀರಿ. ನಿಮ್ಮ Billಗಳು pass ಆಗಬೇಕೋ ಇಲ್ಲವೋ?

ಶ್ರೀ ಹೆಚ್.ಡಿ. ರೇವಣ್ಣ :– ಈ Bill pass ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಯಾವ offence ಗೆ ಎಷ್ಟು penalty ಎಂದು ನಿಗದಿಪಡಿಸುವಂತಹ ವ್ಯವಸ್ಥೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ :- ಅದರ ಬಗ್ಗೆ ಒಂದು rules ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಆಯಿತು.

ಪರ್ಯಾಲೋಚನಾ ಪ್ರಸ್ತವ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ಬಂದರುಗಳು (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು :- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :- ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಬಂದರುಗಳು (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007ರ ಕರ್ನಾಟಕ ಬಂದರುಗಳ (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ – 2)

ಆ) <u>ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2006</u>

<u>ಪರ್ಯಾಲೋಚನಾ ಪ್ರಸ್ತಾವ</u>

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, 2006ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈಗ ಇರುವಂತಹ KMC Act ನಲ್ಲಿ Corporation Ward ಗಳ ಸಂಖ್ಯೆ 100 ಇರುವುದನ್ನು ಇವತ್ತು 150 ಸಂಖ್ಯೆಗೆ ಏರಿಸುವುದಕ್ಕೆ ಈ ಒಂದು ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತಿದ್ದೇನೆ. ಬೆಂಗಳೂರು ನಗರ ಬಹಳ ವೇಗವಾಗಿ ಬೆಳವಣಿಗೆಯನ್ನು ಕಂಡಿರುವಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿರತಕ್ಕಂತಹ BMP, TMC, CMC ಮತ್ತು 750 ಗ್ರಾಮ ಪಂಚಾಯಿತಿಗಳ memberಗಳು ಇರುವಂತಹ ಈ ಹಳ್ಳಿಗಳನ್ನು ಕೂಡ ಈ ಒಂದು ವ್ಯಾಪ್ತಿಗೆ ತರುವುದಕ್ಕೆ ಈ ವಿಧೇಯಕವನ್ನು ಸದನದಲ್ಲಿ ತಂದಿದ್ದೇನೆಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ದಿಢೀರನೆ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಇರುವಂತಹ 100 ಸದಸ್ಯರ ವಾರ್ಡ್‌ಗಳನ್ನು 150 ವಾರ್ಡ್‌ಗಳನ್ನು ಮಾಡುವುದಕ್ಕೆ